**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ :: 447/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಸಿದ್ದರಾಮಯ್ಯ ಬಿ.ಎಂ. | **PW**-11 |
| **ತಂದೆಯ ಹೆಸರು** | : | ಬಸ್ಸಯ್ಯ | **CW**-28 |
| **ವಯಸ್ಸು** | : | 46 | |
| **ಉದ್ಯೋಗ** | : | ಪೋಲೀಸ್ ನಿರೀಕ್ಷಕರು | |
| **ವಾಸಸ್ಥಳ** | : | ಬೆಂಗಳೂರು | |

**ದಿನಾಂಕಃ21-02-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ನಾನು ದಿಃ18.08.2019 ರಿಂದ ದಿಃ29.06.2020ರ ವರೆಗೂ ಮತ್ತು ದಿಃ01.12.2020 ರಿಂದ 05.02.2021 ರವರೆಗೆ ಶೃಂಗೇರಿ ಪೋಲೀಸ್ ಠಾಣೆಯಲ್ಲಿ, ಪೋಲಿಸ್ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

2. ದಿಃ03.03.2021 ರಂದು ಈ ಕೇಸಿನ ಕಡತವನ್ನು ಚಾಸಾ-27 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿ ಪಂಚರಾದ ಚಾಸಾ-9 ಮತ್ತು 10 ರವರ ಸಮಕ್ಷಮ ಪೋಲಿಸ್ ಠಾಣೆಯಲ್ಲಿ ಚಾಸಾ-1 ರವರ ಸಮಕ್ಷಮ ಮಧ್ಯಾಹ್ನ 1.00 ರಿಂದ 2.00 ರವರೆಗೆ ಮಹಜರ್ ಮಾಡಿ ಮಹಜರ್ ಮೂಲಕ ಚಾಸಾ-1 ರವರು ಹಾಜರು ಮಾಡಿರುವ ಒಂದು ಕಪ್ಪು ಬಣ್ಣದ ಏರ್ ಪಿಸ್ತೂಲ್ ಮತ್ತು ಏರ್ ಗನ್ ಮತ್ತು 2 ಸಂಖ್ಯೆಯ ಪಿಸ್ತೂಲ್ ಪ್ಯಾಲೆಟ್ಸ್, 30 ಸಂಖ್ಯೆಯ ಫೈಬರ್ ಐಟಮ್ಸ್, 5 ಸಂಖ್ಯೆ ಏರ್ ರೈಪಲ್ಸ್ ಪೆಲೆಟ್ಸ್ ಮತ್ತು 2 ಸಂಖ್ಯೆಯ Electrical ಡಿಟೋನಿಟರ್ ವಿಥ್ ಪ್ರೆಮ್ ಮತ್ತು ಜೀವಂತ ಸಂಖ್ಯೆ 7, ಬ್ಲಾಸ್ಟಿಂಗ್ ಕನೆಕ್ಟಿಂಗ್ ವೈಯರ್ ಸುಮಾರು 50 ಗ್ರಾಮ್ ಗನ್ ಪೌಡರ್, ಒಂದು ಬಾಟಲ್ ಗನ್ ಕ್ಲೀನಿಂಗ್ ಆಯಿಲ್, 3 ಜಿಲೆಟಿನ್ ಟ್ಯೂಬ್ 25 mm, 1.25 ಗ್ರಾಮ್ Explosive ಸದರಿ ವಸ್ತುಗಳನ್ನು ಜಪ್ತು ಮಾಡಿಕೊಂಡಿರುತ್ತೇನೆ. ಸದರಿ ಸಮಯದಲ್ಲಿ ಪೋಟೋ ತೆಗೆದಿರುತ್ತೇನೆ. ನಂತರ ಸದರಿ ಮುದ್ದೆ ಮಾಲುಗಳನ್ನು ಪಿ.ಎಫ್ ನಲ್ಲಿ ದಾಖಲೆ ಮಾಡಿಕೊಂಡು FSL ಗೆ ಪರಿಕ್ಷೆಗಾಗಿ ಕಳುಹಿಸಿಕೊಡಲು ಮನವಿ ಸಲ್ಲಿಸಿಕೊಂಡಿರುತ್ತೇನೆ. ಅದೇ ದಿನ ಘಟನಾ ಸ್ಥಳದಲ್ಲಿ ಚಾಸಾ-9 ಮತ್ತು 10 ರವರ ಸಮಕ್ಷಮ ಚಾಸಾ-1 ರವರು ತೋರಿಸಿರುವ ಸ್ಥಳದಲ್ಲಿ ಮದ್ಯಾಹ್ನ 2.10 ರಿಂದ 2.40

ರವರೆಗೆ ಮಹಜರ್ ಮಾಡಿ ಪೋಟೋ ತೆಗೆದಿರುತ್ತೇವೆ. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-3 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯ ಪೋಟೋವನ್ನು ನೋಡಿ ಗುರುತಿಸಿದ್ದು ಈಗಾಗಲೆ ನಿಪಿ-4 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿಪಿ-8 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-8 (ಸಿ) ಎಂದು ಗುರುತಿಸಲಾಯಿತು. ಪೋಟೋವನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿಪಿ-9 ಮತ್ತು 10 ಎಂದು ಗುರುತಿಸಲಾಗಿದೆ. ಸಾಕ್ಷಿಯು ಮು.ಮಾ-1 ರಿಂದ 10 ಅನ್ನು ನೋಡಿ ಗುರುತಿಸಿರುತ್ತಾರೆ. ನಂತರ ದಿಃ 05.03.2020 ರಂದು ಚಾಸಾ 21 ರವರಿಗೆ ಆರೋಪಿಯ ಮನೆ ದಾಖಲೆಗಳನ್ನು ಕೇಳಿ ಮನವಿ ಸಲ್ಲಿಸಿಕೊಂಡಿರುತ್ತೇನೆ. ಅದೇ ದಿನ ಸದರಿ ವಸ್ತುಗಳನ್ನು ನಾಶ ಪಡಿಸಲು ಅನುಮತಿ ನೀಡುವಂತೆ ಮನವಿ ಸಲ್ಲಿಸಿಕೊಂಡಿರುತ್ತೇನೆ. ನಂತರ ದಿಃ06.03.2020 ರಂದು 2 ಮತ್ತು 3 ನೇ ಆರೋಪಿತರ ಸ್ವ-ಇಚ್ಚೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿಃ 08.03.2020 ರಂದು ಚಾಸಾ 21 ರವರಿಂದ ವರದಿ ಮತ್ತು ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ದಿಃ 08.03.2020 ರಂದು ಚಾಸಾ 11 ಮತ್ತು 12 ರವರ ಸಮಕ್ಷಮ ಆರೋಪಿ 2 ಮತ್ತು 3 ರವರು ತೋರಿಸಿದ ಘಟನಾ ಸ್ಥಳದಲ್ಲಿ ಬೆಳಗ್ಗೆ 11.45 ರಿಂದ 12.45 ರವರೆಗೆ ಸ್ಥಳ ಮಹಜರ್ ಮಾಡಿ 3 ನೇ ಆರೋಪಿ ಹಾಜರು ಮಾಡಿರುವ ಲೈಸನ್ಸ್ ನ ದೃಡೀಕೃತ ಪ್ರತಿಯನ್ನು ಜಪ್ತು ಮಾಡಿಕೊಂಡು ಪೋಟೊ ತೆಗೆದಿರುತ್ತೇವೆ. ಸಾಕ್ಷಿಯು ಸ್ವಇಚ್ಚೆ ಹೇಳಿಕೆ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 22 ಮತ್ತು 23 ಎಂದು ಸಾಕ್ಷಿಯ ಸಹಿ 22-ಎ ಮತ್ತು 23-ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ನಿಪಿ 18 ಮತ್ತು 19 ರಂತೆ ಚಾಸಾ 15 ಮತ್ತು 16 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

3. ದಿಃ26.06.2020 ರಂದು ಚಾಸಾ-1 ರಿಂದ 4 ರವರ ಹಾಜರಾತಿ ಪ್ರಮಾಣಪತ್ರ ಹಾಗೂ ಮಹಜರ್ ಕಾಲದಲ್ಲಿ ತೆಗೆದ ಪೋಟೊವನ್ನು ನೀಡುವಂತೆ ಚಾಸಾ 1 ರವರಿಗೆ ಮನವಿ ಸಲ್ಲಿಸಿಕೊಂಡಿರುತ್ತೇನೆ. ನಂತರ ದಿಃ27.06.2020 ರಂದು 1 ನೇ ಆರೋಪಿ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು ದಸ್ತಗಿರಿ ಕ್ರಮ ಅನುಸರಿಸಿ ದಸ್ತಗಿರಿ ಮಾಡಿ ಅವರ ಸ್ವ-ಇಚ್ಚೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸ್ವ-ಇಚ್ಚೆ

ಹೇಳಿಕೆಯಂತೆ 1 ನೇ ಆರೋಪಿ ತೋರಿಸಿದಂತೆ ಘಟನಾ ಸ್ಥಳದಲ್ಲಿ ಬೆಳಗ್ಗೆ 11.30 ರಿಂದ 12.30 ರವರಗೆ ಮಹಜರ್ ಮಾಡಿ ಫೋಟೊ ತೆಗೆದಿರುತ್ತೇನೆ.

4. ನಂತರ ನನಗೆ ವರ್ಗಾವಣೆ ಆಗಿದ್ದರಿಂದ ಕಡತವನ್ನು ಚಾಸಾ 29 ರವರಿಗೆ ತನಿಖೆಗಾಗಿ ನೀಡಿರುತ್ತೇನೆ. 1 ನೇ ಆರೋಪಿಯ ಸ್ವ-ಇಚ್ಚೆ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 24 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-24 (ಎ) ಎಂದು ಗುರುತಿಸಲಾಯಿತು. ಚಾಸಾ-21 ರವರಿಗೆ ನೀಡಿರುವ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 25 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-25 (ಎ) ಎಂದು ಗುರುತಿಸಲಾಯಿತು. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು 26 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-26 (ಎ) ಎಂದು ಗುರುತಿಸಲಾಯಿತು. ಅಸೆಸ್ ಮೆಂಟ್ ಅನ್ನು ನೋಡಿ ಗುರುತಿಸಿದ್ದು, ನಿಪಿ 27 ಎಂದು ಗುರುತಿಸಲಾಯಿತು.

5. ದಿಃ 06.01.2021 ರಂದು ಚಾಸಾ-17 ರವರು ನೀಡಿರುವ FSL ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯ ಸದರಿ ವರದಿಯನ್ನು ನೋಡಿ ಗುರುತಿಸಿದ್ದು 28 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ಸದರಿ ಚಾಸಾ-17 ರವರು ನೀಡಿರುವ ಮಣ್ಣನ್ನು FSL ಗೆ ಕಳುಹಿಸಿಕೊಡಲು ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿರುತ್ತೇನೆ. ದಿಃ29.01.2021 ರಂದು ಚಾಸಾ-22 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 31.01.2021 ರಂದು FSL ಬೆಂಗಳೂರು ರವರಿಂದ ವರದಿ ಪಡೆದುಕೊಂಡಿರುತ್ತೇನೆ. ಸಾಕ್ಷಿಯ ಸದರಿ ವರದಿಯನ್ನು ನೋಡಿ ಗುರುತಿಸಿದ್ದು 29 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-29 (ಎ) ಎಂದು ಗುರುತಿಸಲಾಯಿತು. ನಂತರ ಚಾಸಾ-30 ರವರಿಗೆ ಕಡತವನ್ನು ನೀಡಿರುತ್ತೇನೆ. ಸಾಕ್ಷಿಯು ಆರೋಪಿ 2 ಮತ್ತು 3 ರವರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು 1 ನೇ ಆರೋಪಿಯು ತೋರಿಸಿರುವ ಆರೋಪಿ 2 ಮತ್ತು 3 ರವರ ಮನೆಗೆ ಸಬಂಧಿಸಿ ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು, ಈಗಾಗಲೇ ನಿಪಿ-11 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಫೋಟೋವನ್ನು ನೋಡಿ ಗುರುತಿಸಿದ್ದು, ಈಗಾಗಲೇ ನಿಪಿ-12 ಎಂದು ಗುರುತಿಸಲಾಯಿತು. ಸಾಕ್ಷಿಯು 1 ನೇ ಆರೋಪಿ ತೋರಿಸಿರುವ ತನ್ನ ಮನೆಗೆ ಸಂಬಂಧಿಸಿ ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-15 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ- 15(ಬಿ ) ಎಂದು ಗುರುತಿಸಲಾಯಿತು.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ. HRU ವಕೀಲರಿಂದ ::**

1. ನಾನು ಚಾಸಾ-1 ರವರಿಂದ ನಾನು ಮು.ಮಾ-1 ರಿಂದ 10 ಜಪ್ತು ಮಾಡಿಕೊಂಡಿರುವ ಸಂಬಂಧ ಚಾಸಾ-1 ರವರ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಸದರಿಯವರು ವಸ್ತುಗಳನ್ನು ಎಲ್ಲಿ ಜಪ್ತು ಮಾಡಿಕೊಂಡಿರುವ ಬಗ್ಗೆ ಮಹಜರ್ ನಾನು ಪಡೆದುಕೊಂಡಿರುತ್ತೇನೆ. ಈ ಸಂಬಂಧ ಪೋಟೋ ಇರುವುದಿಲ್ಲ. ಚಾಸಾ 1 ರವರು ಮು.ಮಾ-1 ರಿಂದ 10 ಜಪ್ತು ಮಾಡಿಕೊಳ್ಳುವ ಸಮಯದಲ್ಲಿ ನಮಗೆ ವಿಚಾರ ತಿಳಿಸಿರುವುದಿಲ್ಲ. ಹೇಳಲಾದ ಕೃತ್ಯ ಸ್ಥಳವು ನಮ್ಮ ಠಾಣೆಯಿಂದ 1 ಕಿ.ಮೀ. ದೂರದಲ್ಲಿರುತ್ತದೆ ಎಂದರೆ ಸರಿ. ಚಾಸಾ-1 ರವರಿಂದ ನಾನು ಮು.ಮಾ.-1 ರಿಂದ 10 ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಮು.ಮಾ-1 ರಿಂದ 10 ಆರೋಪಿ ಮನೆಯಿಂದ ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 10 ಆರೋಪಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-9 ಮತ್ತು 10 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-3 ರಂತೆ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪೋಟೋ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪೋಟೋಗಳು 1 ನೇ ಆರೋಪಿಯ ಮನೆಗೆ ಸಂಬಂಧಿಸಿದ ಪೋಟೋಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕಾಂಗ್ರೇಸ್ ಪಕ್ಷಕ್ಕೆ ಸೇರಿದವರು ಎಂದರೆ ಸರಿ. ಚಾಸಾ-9 ಮತ್ತು 10 ಬಿ.ಜೆ.ಪಿ. ಪಕ್ಷಕ್ಕೆ ಸೇರಿರುತ್ತಾರೆ ಎಂದರೆ ಇರಬಹುದು. ಚಾಸಾ-7 ರವರು ಶೃಂಗೇರಿ ಪಟ್ಟಣ ಪಂಚಾಯತಿ ಅಧ್ಯಕ್ಷ ರಾಗಿರುತ್ತಾರೆ ಎಂದರೆ ಸರಿ. ಸದರಿ ರವರು ಬಿ.ಜೆ.ಪಿ ಪಕ್ಷದಿಂದ ಆಯ್ಕೆಯಾಗಿರುತ್ತಾರೆ ಎಂದರೆ ಸರಿ. ನಾನು ಆರೋಪಿತರ ಸ್ವ-ಇಚ್ಛೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ, ಎಂದರೆ ಸರಿಯಲ್ಲ. ನಾನು ಆರೋಪಿತರ ಸ್ವ-ಇಚ್ಛೆ ಹೇಳಿಕೆ ಪಡೆದುಕೊಂಡಿದ್ದಲ್ಲಿ ಸಾಕ್ಷಿದಾರರ ಸಮಕ್ಷಮ ಪಡೆದುಕೊಳ್ಳುತ್ತಿದ್ದೆ ಎಂದರೆ ನಾನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ಲೈಸನ್ಸ್ ಅನ್ನು ಜಪ್ತು ಮಾಡಿಕೊಂಡಿರುವುದಿಲ್ಲ, ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿರುವುದಿಲ್ಲ, ಯಾವುದೇ FSL ವರದಿ ಪಡೆದುಕೊಂಡಿರುವುದಿಲ್ಲ ಮತ್ತು ಸ್ಥಳ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬಿ.ಜೆ.ಪಿ. ಮತ್ತು ಭಜರಂಗ ದಳದ

ಕಾರ್ಯಕರ್ತರದ ಚಿತಾವಣೆ ಮೇರೆಗೆ ಆರೋಪಿಯ ವಿರುದ್ಧ ಸುಳ್ಳು ತನಿಖೆ ನಡೆಸಿ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.